# ಅಲೆಮಾರಿಗೆ ಆಸ್ಕರ್!

■ ಪ್ರವೀಣ ಕುಲಕರ್ಣಿ

ಕಳೆದವಾರ ಆಸ್ಕರ್ ಪ್ರಶಸ್ತಿಗಳು ಘೋಷಣೆಯಾದಾಗ ಚೀನಾದಲ್ಲಿ ಕಂಡುಬಂದಿದ್ದು ಬಲು ವಿಚಿತ್ರವಾದ ಸನ್ನಿವೇಶ. ‘ಚೀನಾದ ಹುಡುಗಿ’ ಕ್ಲೋಯ್ ಝಾವೊ ಎರಡು ಆಸ್ಕರ್ ಪ್ರಶಸ್ತಿಗಳನ್ನು ಗೆದ್ದ ಸುದ್ದಿ ಬಂದರೂ ಅಲ್ಲಿನ ನಾಗರಿಕರಿಗೆ ಸಂಭ್ರಮಿಸಲು ಸಾಧ್ಯವಾಗದಂತಹ ಸ್ಥಿತಿ. ಸರ್ಕಾರದ ಹಿಡಿತದಲ್ಲಿರುವ ಮಾಧ್ಯಮಗಳು ಅಪ್ಪಿತಪ್ಪಿಯೂ ಝಾವೊ ಸಾಧನೆಯ ಸುದ್ದಿಯನ್ನು ಪ್ರಕಟಿಸಲಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲೂ ಈ ಸುದ್ದಿಗೆ ಅಲ್ಲಿನ ಸರ್ಕಾರ ನಿರ್ಬಂಧ ವಿಧಿಸಿತು. ಇದಕ್ಕೆ ಕಾರಣ, ಅಮೆರಿಕದಲ್ಲಿ ನೆಲೆಸಿರುವ ಝಾವೊ, ಹಿಂದೊಮ್ಮೆ ಚೀನಾ ವಿರುದ್ಧ ಮಾತನಾಡಿದ್ದು!

ಹಾಲಿವುಡ್‌ನಲ್ಲಿ ಪ್ರಶಸ್ತಿ ಘೋಷಣೆಯಾದಾಗ ಸಂಭ್ರಮದ ದೊಡ್ಡ ಅಲೆಯನ್ನು ಎಬ್ಬಿಸಿದ್ದು ಝಾವೊ ಅವರ ‘ನೊಮ್ಯಾಡ್‌ಲ್ಯಾಂಡ್’. ಝಾವೊ ಅವರಿಗೆ ‘ಅತ್ಯುತ್ತಮ ಚಿತ್ರ’, ‘ಅತ್ಯುತ್ತಮ ನಿರ್ದೇಶನ’ ಪ್ರಶಸ್ತಿಗಳನ್ನು ತಂದುಕೊಟ್ಟ ಈ ಚಿತ್ರ, ಫ್ರಾನ್ಸಿಸ್ ಮೆಕ್‌ಡರ್ಮ್ಯಾಂಡ್ ಅವರಿಗೆ ‘ಅತ್ಯುತ್ತಮ ನಟಿ’ ಕಿರೀಟವನ್ನೂ ತೊಡಿಸಿತು. ‘ಅತ್ಯುತ್ತಮ ನಿರ್ದೇಶನ’ ಪ್ರಶಸ್ತಿ ಪಡೆದ ಝಾವೊ, ಈ ಸಾಧನೆ ಮಾಡಿದ ಮೊದಲ ಏಷ್ಯನ್ ಹಾಗೂ ಕಪ್ಪುವರ್ಣೀಯ ಮಹಿಳೆ ಎಂಬ ಹಿರಿಮೆಗೂ ಪಾತ್ರರಾದರು. ತಮ್ಮ ಮೊದಲ ಚಿತ್ರದಿಂದಲೇ (ಸಾಂಗ್ಸ್ ಮೈ ಬ್ರದರ್ ಟಾಟ್ ಮೀ) ಭಿನ್ನಶೈಲಿಯ ನಿರ್ದೇಶಕಿ ಎಂದು ಗುರ್ತಿಸಿಕೊಂಡ ಈ ಸಾಧಕಿ, ಇದುವರೆಗೆ ನಾಲ್ಕು ಸಿನಿಮಾಗಳನ್ನು ಮಾಡಿದ್ದಾರೆ. ನಾಲ್ಕೂ ಒಂದಕ್ಕಿಂತ ಒಂದು ಭಿನ್ನ.

‘ನೊಮ್ಯಾಡ್‌ಲ್ಯಾಂಡ್’ ಅವರ ಮೂರನೇ ಚಿತ್ರ. ‘ವ್ಯಾನ್‌ಡ್ವೆಲಿಂಗ್’ (ವಾಹನದಲ್ಲೇ ಬದುಕು ಸಾಗಿಸುವ ಅಲೆಮಾರಿ) ಮಹಿಳೆಯೊಬ್ಬಳ ಹೋರಾಟದ ಕಥಾವಸ್ತುವನ್ನು ಅದು ಹೊಂದಿದೆ. ಗಂಡನನ್ನೂ ಕೆಲಸವನ್ನೂ ಕಳೆದುಕೊಂಡ ಆ ಮಹಿಳೆ ಪಯಣಿಸುತ್ತಲೇ ನಡೆಸುವ ಬದುಕಿನ ಯಾನ ಅಂತಃಕರಣವನ್ನು ಕಲಕುತ್ತದೆ. ತನ್ನಂತೆಯೇ ಇರುವ ದಾರಿಹೋಕರ ಪ್ರೀತಿಯನ್ನು ಸಂಪಾದಿಸುವ ಆಕೆ, ಅಂತಹ ಸಾವಿರಾರು ಸಹಪಥಿಕರಲ್ಲಿ ಒಬ್ಬಳಾಗಿ ಕರಗಿಹೋಗುತ್ತಾಳೆ; ನದಿಯಲ್ಲಿ ಒಂದಾಗಿ ಬೆರೆಯುವ ನೀರಿನ ಬಿಂದುವಿನಂತೆ. ಹಾಗೊಮ್ಮೆ ಒಂದಾದ ಬಳಿಕ ನದಿ ಕರೆದೊಯ್ದ ಕಡೆಗೇ ಆ ನೀರಿನ ಬಿಂದುವಿನ ಓಟವಲ್ಲವೇ? ಈ ಮಹಿಳೆಯ ಪಯಣವೂ ಹಾಗೇ.

ಝಾವೊ ಕೂಡ ಒಬ್ಬ ಅಲೆಮಾರಿಯೇ ಸರಿ. ಹುಟ್ಟೂರು ಚೀನಾದ ಬೀಜಿಂಗ್ ಆಗಿದ್ದರೂ ಶಿಕ್ಷಣ ಪಡೆಯಲು ಮೊದಲಿಗೆ ಬಂದು ಸೇರಿದ್ದು ಲಂಡನ್ನಿಗೆ. ಅಲ್ಲಿ ಹೈಸ್ಕೂಲ್ ಅಧ್ಯಯನ ಮುಗಿಸಿದ ಆಕೆ, ಕಾಲೇಜು ಸೇರಲು ಹಾರಿದ್ದು ಅಮೆರಿಕಕ್ಕೆ. ಅಲ್ಲಿಯೇ ಚಿತ್ರ ನಿರ್ಮಾಣದ ತರಬೇತಿಯನ್ನೂ ಪಡೆದ ಝಾವೊ ಕೇವಲ 5–6 ವರ್ಷಗಳಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಗಟ್ಟಿಯಾಗಿಯೇ ಮೂಡಿಸಿದ್ದಾರೆ.

ಇಂತಹ ಸಾಧಕಿಯ ವಿರುದ್ಧ ಚೀನಿಯರಿಗೆ ಏಕೆ ಸಿಟ್ಟು? ಝಾವೊ, ಕೆಲವು ವರ್ಷಗಳ ಹಿಂದೆ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಚೀನಾದ ವಿರುದ್ಧ ಮಾತನಾಡಿದ್ದರು. ‘ಚೀನಾದಲ್ಲಿ ನಾನು ಬಾಲಕಿಯಾಗಿದ್ದಾಗ ಕಳೆದ ದಿನಗಳು ಅವು. ಸುತ್ತಲೂ ಸುಳ್ಳಿನ ಲೋಕವೇ ತುಂಬಿತ್ತು. ಹೊರಬರುವುದು ಸಾಧ್ಯವೇ ಇಲ್ಲವೇನೊ ಎನಿಸುವಂತಹ



ಉಸಿರುಗಟ್ಟಿಸುವ ವ್ಯವಸ್ಥೆ ಅಲ್ಲಿತ್ತು. ಆ ದಿನಗಳಲ್ಲಿ ಸಿಗುತ್ತಿದ್ದ ಮಾಹಿತಿ ಎಲ್ಲವೂ ಸತ್ಯದಿಂದ ದೂರವೇ ಇರುತ್ತಿತ್ತು. ಇದರಿಂದ ನಾನು ಕುದಿದುಹೋದೆ. ಇಂಗ್ಲೆಂಡ್‌ಗೆ ಬಂದಮೇಲೆ ನನಗೆ ದೇಶದ ನೈಜ ಇತಿಹಾಸವನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ಸತ್ಯ ಏನೆಂಬುದನ್ನು ಅರಿಯಲೂ ದಾರಿಯಾಯಿತು. ನಿಮ್ಮಲ್ಲಿ ಮಾಹಿತಿಯ ಅಸ್ತ್ರವಿದ್ದಾಗ ಸುಳ್ಳು ಹೇಳುವವರಿಗೆ ಸವಾಲು ಹಾಕಬಹುದು’ ಎಂದು ಆಕೆ ಹೇಳಿದ್ದರು. ಚೀನಾದ ರಾಷ್ಟ್ರೀಯವಾದಿಗಳು ಅವರ ಈ ಹೇಳಿಕೆಯಿಂದ ರೊಚ್ಚಿಗೆದ್ದಿದ್ದರು.

ಸಿನಿಮಾ ವಿಮರ್ಶಕರಿಂದ ಮೆಚ್ಚುಗೆಗೆ ಪಾತ್ರವಾದ ‘ನೊಮ್ಯಾಡ್‌ಲ್ಯಾಂಡ್’ ಚಿತ್ರವನ್ನು ಚೀನಾದಲ್ಲಿ ಪ್ರದರ್ಶನ ಮಾಡಲು ಅವಕಾಶ ಕೊಟ್ಟಿರಲಿಲ್ಲ. ಈಗ ಪ್ರಶಸ್ತಿ ಬಂದಾಗಲೂ ಸರ್ಕಾರ ಜನರನ್ನು ಸಂಭ್ರಮಿಸಲು ಬಿಡಲಿಲ್ಲ. ಅಲ್ಲಿನ ಸಾಮಾಜಿಕ ಜಾಲತಾಣ ವೈಬೊದಲ್ಲಿ ಝಾವೊ ಹೆಸರಿನ ಸರ್ಚ್ ಮಾಡಿದರೆ, ‘ಕೆಲವು ಕಾನೂನುಗಳು, ನಿರ್ಬಂಧಗಳು ಹಾಗೂ ನೀತಿಗಳ ಕಾರಣದಿಂದ ಈ ಪುಟ ಲಭ್ಯವಾಗದು’ ಎಂಬ ಸಂದೇಶ ಬರುತ್ತಿತ್ತು. ‘ಪರಿಸ್ಥಿತಿ ಇಷ್ಟೊಂದು ಕಠಿಣವಾಗಿದ್ದರೂ ಹೇಗೆ ನನ್ನ ಯಾನ ಮಾತ್ರ ಮುನ್ನುಗ್ಗುತ್ತಿದೆ ಎಂಬ ವಿಷಯವಾಗಿ ನಾನು ತುಂಬಾ ಯೋಚಿಸುತ್ತಿದ್ದೇನೆ’ ಎಂದು ಝಾವೊ ಪ್ರಶಸ್ತಿ ಸ್ವೀಕರಿಸಿದಾಗ ಹೇಳಿದರು. ‘ಹುಟ್ಟಿದಾಗ ಎಲ್ಲ ಜನರೂ ಒಳ್ಳೆಯವರೇ’ ಎಂಬ ಚೀನಿ ಭಾಷೆಯ ಕಾವ್ಯದ ಸಾಲನ್ನೂ ಅವರು ನೆನಪಿಸಿಕೊಂಡರು.

ಝಾವೊ ಅವರ ತಂದೆ ಯುಝಿ ಚೀನಾದಲ್ಲಿ ದೊಡ್ಡ ಉದ್ಯಮಿ. ಅವರ ತಾಯಿ ಆಸ್ಪತ್ರೆಯ ಉದ್ಯೋಗಿಯಾಗಿದ್ದರು. ಇಬ್ಬರೂ ಬೇರೆಯಾದ ಮೇಲೆ ಝಾವೊ, ಸಾಂಗ್ ಡಾಂಡನ್ ಅವರನ್ನು ವಿವಾಹವಾಗಿದ್ದರು. ಝಾವೊ, ಸಾಂಗ್ ಅವರ ಚಿತ್ರಗಳನ್ನೇ ನೋಡಿ ಬೆಳೆದವರು. ಆಕೆ, 15ರ ಹರೆಯದಲ್ಲಿದ್ದಾಗ ಇಂಗ್ಲೆಂಡ್‌ಗೆ ಹೊರಟರು. ಆಗ ಅವರಿಗೆ ಒಂದು ಇಂಗ್ಲಿಷ್ ಪದವೂ ಬರುತ್ತಿರಲಿಲ್ಲ! ಈಗ ಇಂಗ್ಲಿಷ್‌ನಲ್ಲಿ ಹಾಲಿವುಡ್ ಸಿನಿಮಾ ಮಾಡುವ ಎತ್ತರಕ್ಕೆ ಬೆಳೆದಿದ್ದಾರೆ.

ಸದ್ಯ ಕ್ಯಾಲಿಫೋರ್ನಿಯಾದಲ್ಲಿ ವಾಸವಾಗಿರುವ ಝಾವೊ ಅವರಿಗೆ ಮೂರು ಕೋಳಿ ಮರಿಗಳು ಹಾಗೂ ಎರಡು ನಾಯಿಗಳು ಸಂಗಾತಿಗಳಾಗಿವೆ. ಸಿನಿಮಾಟೋಗ್ರಾಫರ್ ಜೋಷುವಾ ಜೇಮ್ಸ್ ರಿಚರ್ಡ್ಸ್ ಅವರ ನೆಚ್ಚಿನ ಗೆಳೆಯನಾಗಿದ್ದು, ಝಾವೊ ಜತೆಯಲ್ಲೇ ವಾಸವಾಗಿದ್ದಾರೆ. ಚೀನಿಯರ ದ್ವೇಷವನ್ನು ಮರೆತುಬಿಟ್ಟಿರುವ ಅವರು ಗೆಳೆಯ ಜೋಷುವಾ ಅವರಿಗೆ ‘ಲೈಟ್ಸ್ ಆನ್’ ಎಂದು ಹೇಳಲು ಹೊಸದೊಂದು ಸಿನಿಮಾದ ತಯಾರಿಯಲ್ಲಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65